## ಹಚ್ಚೇವು ಚಳವಳಿಯ ದೀಪ

ಮೊದಲು ಕುವೆಂಪು ವಿದ್ಯಾರ್ಥಿ ದೆಸೆಯಲ್ಲೇ 'ಕರ್ಣಾಟಕ ರಾಷ್ಟ್ರಗೀತೆ'ಯ ಮೊದಲ ಕರಡನ್ನು ಬರೆದಿದ್ದರು; ಕರ್ನಾಟಕದ ಉದಯಕ್ಕಿಂತ ಮೊದಲು 1928ರಲ್ಲೇ ಪ್ರಕಟವಾದ 'ಜಯ ಹೇ ಕರ್ಣಾಟಕ ಮಾತೆ' ಕವಿತೆ 'ಒಡಕಲು ರಾಷ್ಟ್ರೀಯತೆ'ಯನ್ನು ತಿರಸ್ಕರಿಸಿ, ಸರ್ವಸ್ವೀಕಾರ ರಾಷ್ಟ್ರೀಯತೆಯನ್ನು ಪ್ರತಿಪಾದಿಸಿತು. ಇದು ಮುಂದೆ ಕರ್ನಾಟಕದ ನಾಡಗೀತೆಯಾದದ್ದು ಈ ಪದ್ಯ ಮಂಡಿಸುವ ಸಮಾನತೆಯ ಪರಿಕಲ್ಪನೆಗಳನ್ನು ಕರ್ನಾಟಕ ಸರ್ಕಾರ ತಾತ್ವಿಕವಾಗಿ ಸ್ವೀಕರಿಸಿರುವುದಕ್ಕೆ ಸಾಕ್ಷಿಯಾಗಿದೆ. ಮೋಹಕ ಭಾವಗೀತೆಯೂ ಆಗಿರುವ ನಾಡಗೀತೆಯ ಭಾವನಾತ್ಮಕ ಪರಿಣಾಮದಿಂದಾಗಿ ಕರ್ನಾಟಕವೆಂದರೆ 'ಹಿಂದೂ ಕ್ರೈಸ್ತ ಮುಸಲ್ಮಾನ, ಪಾರಸಿಕ ಜೈನರುದ್ಯಾನ' ಎಂಬ ಆಶಯ ಸಾಮಾನ್ಯರಿಗೂ ಮನದಟ್ಟಾಗುತ್ತಿರುತ್ತದೆ; ಜಾತ್ಯತೀತ ಕರ್ನಾಟಕವನ್ನು ನಿರ್ಮಾಣ ಮಾಡುತ್ತಾ ಬಂದಿರುವ ಪ್ರಬುದ್ಧ ಲೇಖಕ, ಲೇಖಕಿಯರು ಸರ್ವ ಸಾಮರಸ್ಯದ ಈ ತಾತ್ವಿಕತೆಯನ್ನು ವಿಸ್ತರಿಸುತ್ತಲೇ ಬಂದಿದ್ದಾರೆ.

'ನೇಗಿಲಯೋಗಿ' ಪದ್ಯ ಪ್ರಸಾರವಾಗುತ್ತಿದ್ದ ಆಸುಪಾಸಿನಲ್ಲೇ ಬಂದ ಕಾರಂತರ 'ಚೋಮನ ದುಡಿ'ಯಲ್ಲಿ ದಲಿತ ಚೋಮ 'ತನ್ನ ಹಣೆಯಲ್ಲಿ ನೇಗಿಲಿನ ಯೋಗ ಬರೆಯಲಿಲ್ಲವೆಂದು ಚಿಂತಿಸುತ್ತಿದ್ದ' ಎಂಬ ಮಾತು ಬರುತ್ತದೆ. ಬ್ರಾಹ್ಮಣ ಜಮೀನ್ದಾರ ಸಂಕಪ್ಪಯ್ಯನವರ ಆಳಾದ ಚೋಮನಿಗೆ 'ಬೇಸಾಯಗಾರನಾಗಬೇಕೆಂಬ ಆಸೆ ಕುತ್ತಿಗೆಯವರೆಗಿದೆ'; ಆದರೆ ಸಂಕಪ್ಪಯ್ಯನನ್ನು 'ನಾಲ್ಕು ಗೇಣು ಜಾಗ ನನಗೆ ಕೊಡಿ' ಎಂದು ಕೇಳುವ ಸಾಹಸವಿಲ್ಲ.' ಹಾಗಿದ್ದೂ, 'ದನಿಯರಲ್ಲಿಗೆ ಹೋಗಿ ಒಂದು ಮುಡಿ ಗದ್ದೆಯನ್ನಾದರೂ ತನಗೆ ಗೇಣಿಗೆ ಕೊಡಬೇಕೆಂದು ಕೇಳುವುದು ಎಂದು ಆತ ಮನಸ್ಸು ಮಾಡಿದ್ದಾನೆ.' ಕೊನೆಗೂ ಚೋಮನಿಗೆ



ರಾಜಕಾರಣದಲ್ಲಿ ಹಿಂದುಳಿದ ವರ್ಗಗಳಿಗೆ ಧ್ವನಿ ದೊರಕಿಸಿಕೊಟ್ಟ ದೇವರಾಜ ಅರಸು


ಭೂಮಿ ಸಿಗುವುದಿಲ್ಲ. 1933ರಲ್ಲಿ ಪ್ರಕಟವಾದ ಈ ವಾಸ್ತವವಾದಿ ಕಾದಂಬರಿ ತನ್ನ ಕಾಲದ ಜಮೀನ್ದಾರಿ ವಾಸ್ತವಗಳ ನಡುವೆ ಇದಕ್ಕಿಂತ ಭಿನ್ನವಾದ ಅಂತ್ಯವನ್ನು ಕೊಡುವುದು ಕಷ್ಟವಿತ್ತೇನೋ.

ಆದರೂ ಚೋಮನ ದನಿ ಸಣ್ಣಗೆ ಕೇಳಿಬಂದ ಹದಿನೆಂಟು ವರ್ಷಗಳ ನಂತರ, ಮಲೆನಾಡಿನ ಒಕ್ಕಲಿಗ ಭೂಮಾಲೀಕರಿಂದ ತುಳಿತಕ್ಕೊಳಗಾಗಿದ್ದ ಮಲೆನಾಡಿನ ಗೇಣಿದಾರ ದೀವರು ಚೋಮನಂತೆ ಅಸಹಾಯಕರಾಗಿ ಸುಮ್ಮನಿರದೆ ಬಂಡೆದ್ದರು. ಧಣಿಗಳ ಗದ್ದೆಯನ್ನು ಉಳುಮೆ ಮಾಡುತ್ತಾ, ಅವರ ಮನೆಯಲ್ಲಿ ತಮ್ಮ ಕುಟುಂಬವಿಡೀ ಬಿಟ್ಟಿ ಚಾಕರಿ ಮಾಡುತ್ತಾ, ಚೋಮನಿಗಿಂತ ಒಂಚೂರು ಭಿನ್ನ ಸ್ಥಿತಿಯಲ್ಲಿದ್ದ ದೀವರು ಧಣಿಗಳ ಮೋಸದ ವಿರುದ್ಧ, ಶೋಷಣೆಯ ವಿರುದ್ಧ ದನಿಯೆತ್ತಿದ್ದರು. ಸಣ್ಣಗೆ ಶುರುವಾದ ದೀವರ ಪ್ರತಿಭಟನೆ ಆ ಜಾತಿಯಿಂದಲೇ ಬಂದ ಸ್ಕೂಲ್ ಮೇಷ್ಟ್ರು ಗಣಪತಿಯಪ್ಪನವರ ನೇತೃತ್ವದಲ್ಲಿ ಹೋರಾಟವಾಗತೊಡಗಿತು. ಸಮಾಜವಾದಿಗಳು ಭಾಗವಹಿಸಿದ ಮೇಲೆ ಅದು ಕಾಗೋಡು ರೈತ ಚಳವಳಿಯಾಗಿ ಬೆಳೆಯಿತು. ಅಲ್ಲಿ ಮೊಳಗಿದ 'ಉಳುವವನಿಗೇ ಭೂಮಿ' ಎಂಬ ಘೋಷಣೆ ಗೋಪಾಲಗೌಡರು ಶಾಸಕರಾದಾಗ ಮೈಸೂರು ವಿಧಾನಸಭೆಯಲ್ಲಿ ಪ್ರತಿಧ್ವನಿಸಿತು. ಆ ಕಾಲದಲ್ಲಿ ಶಾಸಕರಾಗಿದ್ದ ದೇವರಾಜ ಅರಸು ಮುಂದೆ ಮುಖ್ಯಮಂತ್ರಿಯಾದ ಮೇಲೆ 'ಕರ್ನಾಟಕ ಭೂಸುಧಾರಣೆ ಮಸೂದೆ1974' ಜಾರಿಯಾಗಿ, 'ಉಳುವವನಿಗೇ ಭೂಮಿ'ಯ ಕನಸು ಒಂದು ಮಟ್ಟದಲ್ಲಾದರೂ ಸಾಕಾರಗೊಂಡಿತು. ಇದೀಗ ಕರ್ನಾಟಕ ಸರ್ಕಾರ ಆ ಕ್ರಾಂತಿಕಾರಕ ಮಸೂದೆಯ ಫಲಗಳನ್ನೇ ಇಲ್ಲವಾಗಿಸುವ ತಿದ್ದುಪಡಿಯನ್ನು ಜಾರಿಗೆ ತಂದಿದೆ; ಕೇವಲ ನಲವತ್ತೈದು ವರ್ಷಗಳ ಕೆಳಗೆ 'ಉಳುವವನಿಗೇ ಭೂಮಿ'ಯ ಕಾನೂನಿನ ಪರವಾಗಿ ಕರ್ನಾಟಕದ ಸಾಹಿತಿಗಳು, ಪ್ರಗತಿಪರರು, ರಾಜಕಾರಣಿಗಳು ಗಟ್ಟಿಯಾಗಿ ನಿಂತಿದ್ದ ಕಾಲದಿಂದ ಸ್ಫೂರ್ತಿ ಪಡೆದು ಕ್ರಿಯೆಗಿಳಿಯುವ ಸವಾಲು ಈಗ ನಮ್ಮೆದುರಿಗಿದೆ.

ಮಲೆನಾಡಿನಲ್ಲಿ ಗೇಣಿದಾರರ ಚಳವಳಿ ನಡೆಯುತ್ತಿದ್ದ ಆಸುಪಾಸಿನಲ್ಲೇ ಅತ್ತ ದಕ್ಷಿಣ ಕನ್ನಡದ ಪ್ರಗತಿಶೀಲ ಲೇಖಕ ನಿರಂಜನ ಪಕ್ಕದ ಕೇರಳದ ಕಯ್ಯೂರಿನ ರೈತ ಬಂಡಾಯಕ್ಕೆ ತೀವ್ರವಾಗಿ ಸ್ಪಂದಿಸುತ್ತಿದ್ದರು. ಕಮ್ಯುನಿಸ್ಟ್ ಪಕ್ಷದಲ್ಲಿದ್ದ ನಿರಂಜನ ಕಯ್ಯೂರಿನ ರೈತ ಕ್ರಾಂತಿಕಾರಿಗಳು ಹುತಾತ್ಮರಾಗಿದ್ದನ್ನು ಕಂಡು ವಿಚಲಿತರಾಗಿದ್ದರು. ಕೋರ್ಟಿನಲ್ಲಿ ಈ ಹೋರಾಟದಲ್ಲಿ ಪಾಲ್ಗೊಂಡವರ ವಿಚಾರಣೆಯ ನಾಟಕವನ್ನೂ ನೋಡಿದ್ದರು. ಕಯ್ಯೂರು ಹೋರಾಟವನ್ನು ಅಧ್ಯಯನ ಮಾಡಿ ಅವರು ಬರೆದ 'ಚಿರಸ್ಮರಣೆ' ಐವತ್ತರ



ಕಾಗೋಡು ರೈತ ಚಳವಳಿಗೆ ಸ್ಫೂರ್ತಿಯಾದ ಗಣಪತಿಯಪ್ಪ



'ಚೋಮನದುಡಿ'ಯ ಮೂಲಕ ಭೂಮಿ ಕುರಿತ ದಲಿತರ ಅವಮಾನ, ತುಡಿತಗಳ ಬಗ್ಗೆ ದಲಿತೇತರರ ಗಮನಸೆಳೆದ ಶಿವರಾಮ ಕಾರಂತರು.